# ತುಂಟ ತಂಗಿ

■ ಸೋಮಲಿಂಗ ಬೇಡರ ಬೀಳಗಿ

ತಂದನೊಂದು ಅಪ್ಪ
ಪುಟ್ಟಿಗಂತ ಅಂಗಿ
ತೊಟ್ಟಳದನು ತಂಗಿ
ನೋಡಬೇಕು ಭಂಗಿ
ಸೊಂಟಲೊಂದು ಕೈಯ
ಗಲ್ಲಕೊಂದು ಕೈಯ
ಇಟ್ಟುಕೊಂಡು ನಿಂತು
ಕೊಡುವಳವಳು ಪೋಜು
ಹೂವಿನಂಗಿ ತೊಟ್ಟು
ಮೆಲ್ಲ ಹೆಜ್ಜೆ ಇಟ್ಟು
ವಾರೆ ನೋಟ ಬೀರಿ
ಕೊಡುವಳವಳು ಪೋಜು
ಬಹಳ ತುಂಟಿ ತಂಗಿ
ಅವಳ ಹಾಗೆ ಅಂಗಿ
ಬೊಂಬೆಗಿಡುತ ಮುತ್ತು
ಕೊಡುವಳವಳು ಪೋಜು
ಅಂಗಿ ಧರಿಸಿ ತಂಗಿ
ಸುತ್ತು ಹೊಡೆದು ಗಿರಕಿ
ಮೈಯ ತಿರಗಿ ಬಿದ್ದು
ಕೊಡುವಳವಳು ಪೋಜು! ■



ಚಿತ್ರಗಳು: ಮಂಜುನಾಥ ಹುಲಕೊಪ್ಪ

# ಚಂದ್ರೂ ಮಾಮ ಬಾ!



■ ಪ್ರಕಾಶ ಎಸ್. ಮನ್ನಂಗಿ

ನಂಗೂ ಒಂದು ಮೊಬೈಲು ಸಿಕ್ರೆ
ಚಂದ್ರಂಗೂ ಕಾಲ್ ಮಾಡ್ತೀನಿ!
ಹಲೋ! ಹೇಗಿದ್ದೀಯಾ? ಕೊರೋನಾ
ಬಂತು ಹುಷಾರಾಗಿರು ಅಂತೀನಿ
ಎರಡೆರ್ಡ ವಾರ ನಗತಿರ್ತೀಯಾ?
ಎರಡೆರ್ಡ ವಾರ ಸಪ್ಪಗಿರ್ತೀಯಾ?
ಯಾಕೆ ಅಂತ ಹೇಳ್ತೀಯಾ?
ತಿಂಗಳು ಪೂರ್ತಿ ಬೆಳದಿಂಗಳ ಊಟ
ಮಾಡ್ಬೇಕಂತೀನಿ!
ನಾಕೂ ವಾರ ಬೆಳದಿಂಗಳ ಸೂಸಿ ನಮ್ಮ
ಜೊತೆ ಇರು ಅಂತೀನಿ!
ಥರ ಥರ ತಿಂಡಿ ಸ್ವೀಟೂ ಗೀಟೂ
ಅವನ್ಗೆ ಕೊಡ್ತೀನಿ!
ಅಷ್ಟು ದೂರ ನಮ್ಮನು ಬಿಟ್ಟು ಹೋಗ್ಲೇ
ಬೇಡ ಅಂತೀನಿ!
ನಂಗೂ ಒಂದು ಮೊಬೈಲು ಸಿಕ್ರೆ
ಮೊದಲ್ನೇ ಕಾಲ್ ಅವನ್ಗೆ ಮಾಡ್ತೀನಿ!
ನಿನ್ನನು ಬಿಟ್ರೆ ನಂಗ್ಯಾರಿಲ್ಲ ಚಂದ್ರೂ
ಮಾಮ ಬಾ ಅಂತ ಕರೀತೀನಿ! ■